International Journal of Kannada Research 2022; 8(1): 19-23

International Journal of Kannada Research
www.kannadajournal.com

**ISSN: 2454–5813**
IJKR 2022; 8(1): 19-23
© 2022 IJKR
www.kannadajournal.com
Received: 07-11-2021
Accepted: 10-12-2021

**Dr. NR Chandregowda**
Assistant Professor, DOS & R in Kannada, Karnataka State Open University, Mukthagangotri, Mysore, Karnataka, India

**Girisha KN**
Assistant Professor, Department of Kannada, ST. Joseph's First Grade College, Jayalakshmipuram, Mysore, Karnataka, India

**Corresponding Author:**
**Dr. NR Chandregowda**
Assistant Professor, DOS & R in Kannada, Karnataka State Open University, Mukthagangotri, Mysore, Karnataka, India

# ರಾಗೌ ಕಾವ್ಯದಲ್ಲಿ ಕನ್ನಡ ನಾಡು–ನುಡಿಯ ಚಿಂತನ

**Dr. NR Chandregowda and Girisha KN**

## ಪರಿಚಯ

ಕಾವ್ಯ ಎನ್ನುವುದು ಕೇವಲ ಮಾತಲ್ಲ
ಯಾ ಮೌನವೂ ಅಲ್ಲ,
ಮಾತು ಮೌನಗಳ ನಡುವೆ ತೆರೆದುಕೊಳ್ಳುವ
ಆತ್ಮದ ಅವಲೋಕನ.
(ರಾಗೌ ಸಮಗ್ರ ಕಾವ್ಯ ಪು.ಸ.369)

ಎನ್ನುವ ಮೂಲಕ ಕನ್ನಡ ನಾಡಿನ ಅಂತಃಸತ್ವದಲ್ಲಿ ಜೀವಿಸುತ್ತಿರುವ 'ರಾಗೌ' ಹೊಸಗನ್ನಡ ಸಾಹಿತ್ಯ ಲೋಕದಲ್ಲಿ ಚಿರಪರಿಚಿತರಾಗಿದ್ದಾರೆ. ಕನ್ನಡ ಕಾವ್ಯ ಜಗತ್ತಿಗೆ ತಮ್ಮದೇ ವಿಶೇಷ ಶೈಲಿಯ ಮೂಲಕ ಹೊಸ ಆಶಯವನ್ನು ಸೃಷ್ಟಿಸಿದ್ದಾರೆ. 'ರಾಗೌ' ಅವರು ಸಾಹಿತ್ಯ ಕೃಷಿಯನ್ನು ಆರಂಭಿಸಿದಾಗ ಆ ವೇಳೆಗಾಗಲೇ ಕನ್ನಡ ಕಾವ್ಯ ಕಡಲನ್ನು ಅನೇಕ ತಿಮಿಂಗಲಗಳು ಈಜಿದ್ದವು. ಪ್ರತಿಷ್ಠಿತ ನಾವೆಗಳ ಚಲನೆಯು ಕೂಡ ಆಗಿತ್ತು. ಸಾಕಷ್ಟು ಬದಲಾವಣೆಯ ತರಂಗಗಳು ಅಪ್ಪಳಿಸಿದ್ದವು. ರಾಗೌ ಅವರು ಯಾವುದೇ ತಿಮಿಂಗಲದೊಡನೆ ಸೇರಿಕೊಳ್ಳದೇ, ಬೇರಾವುದೇ ನಾವೆಯನ್ನು ಏರದೆ ಯಾವ ತರಂಗದಲ್ಲಿಯೂ ತಲ್ಲಣಿಸದೇ, ತಮ್ಮದೇ ತೆಪ್ಪಕ್ಕೆ ಹುಟ್ಟು ಹಾಕಿದ ನಾವಿಕ.

ಆಧುನಿಕ ಕನ್ನಡ ಕಾವ್ಯ ಚರಿತ್ರೆಯಲ್ಲಿ ಮಾಡದೇ ಇರುವ ಪ್ರಯೋಗಗಳನ್ನು ಮಾಡುವ ಮೂಲಕ ಬದುಕಿನ ಸೂಕ್ಷ್ಮಾತಿಸೂಕ್ಷ್ಮ ಕಟುವಾಸ್ತವದ ಜಾಡನ್ನು ಭೇದಿಸಿದವರು ರಾಗೌ. ಇವರು ತಮ್ಮ ಚೊಚ್ಚಲ ಕೃತಿಯಾದ 'ಯಾತ್ರೆ'ಯಲ್ಲಿ 'ನಾನು ಯಾವ ಪಂಥಕ್ಕೂ ಸೇರಿದವನಲ್ಲ ಸತ್ಯ, ಸೌಂದರ್ಯಗಳು ಎಲ್ಲಿ ಕಂಡುಬಂದರು, ಯಾವ ಕಡೆಯಿಂದ ಬಂದರೂ ಆರಾಧಿಸುವೆ, ಸ್ವಾಗತಿಸುವೆ' ಎನ್ನುವ ಮೂಲಕ ನವೋದಯ, ನವ್ಯ, ಪ್ರಗತಿಶೀಲ, ದಲಿತ–ಬಂಡಾಯ ಮತ್ತು ಸ್ತ್ರೀವಾದಿ ಸಾಹಿತ್ಯ ಪ್ರಕಾರಗಳಲ್ಲೂ ಕೃಷಿ ಮಾಡಿ ಸೈ ಎನಿಸಿಕೊಂಡರು. ಇವರು ತಮ್ಮ ಜೀವನಾನುಭವದ ಮೂಲಕ ಕಂಡುಕೊಂಡ ಸತ್ಯಗಳು ಹಲವಾರು. ಇವರ ಸಾಹಿತ್ಯ ಕೃತಿಗಳಲ್ಲಿ ಹೇಳದ ವಿಚಾರಗಳಿಲ್ಲ. ಅದರಲ್ಲೂ ಕನ್ನಡ ನಾಡು–ನುಡಿಗೆ ಸಂಬಂಧಿಸಿದಂತೆ ಸಾಕಷ್ಟು ಬರಹಗಳು ಸಾಕ್ಷಿಯಾಗಿವೆ. ರಾಗೌರವರು ತಮ್ಮ ಜೀವನದುದ್ದಕ್ಕೂ ಕನ್ನಡಕ್ಕಾಗಿ ಶ್ರಮಿಸುತ್ತಿರುವ ಕನ್ನಡಜೀವ.

ಕನ್ನಡ ನಾಡು–ನುಡಿಯ ಬಗೆಗೆ ರಾಗೌ ಅವರದು ತುಂಬಿ–ತುಳುಕುವ ಪ್ರೀತಿ. ತಾವು ಜೀವವೆತ್ತಿರುವುದೇ ಕನ್ನಡ ನಾಡು–ನುಡಿಯ ಸೇವೆಗಾಗಿ, ಅದರ ಉತ್ಕೃಷ್ಟತೆಗಾಗಿ ಎನ್ನುವ ಭಾವನೆ ಅವರಲ್ಲಿ ರಕ್ತಗತವಾಗಿತ್ತು. ಸಾಮಾನ್ಯವಾಗಿ ಕನ್ನಡ ನಾಡನ್ನು ಕುರಿತು ಬರೆಯುವುದು, ನಾಡಿನ ಹಿರಿಮೆಯನ್ನು ಹಾಡಿ ಹೊಗಳುವುದು, ಅದರ ದುಸ್ಥಿತಿಗಾಗಿ ಗೋಳಾಡುವುದು, ಕನ್ನಡ ನಾಡನ್ನು ವರ್ಣಿಸುವುದು, ನಾಡಿನ ಪರಿಸ್ಥಿತಿಯನ್ನು ವಿಶ್ಲೇಷಿಸುವುದು ಒಂದು ಸಂಪ್ರದಾಯವೇ ಆಗಿ ಕೊನೆಗೆ ಅದು ಅತಿರೇಕದ ಹಂತವನ್ನು ತಲುಪಿರುವ ಸಂಗತಿಗಳು ಇವೆ. ಇಂಥಹ ಚರ್ವಿತ–ಚರ್ವಣದ ನಡುವೆಯೂ ಪ್ರತಿಭಾನ್ವಿತರಾದ ರಾಗೌ ಅವರು ಕಾವ್ಯದ ನಿಜವಾದ ಉದ್ದೇಶವನ್ನು ಸಾಧಿಸಲು ಮುಂದಾದರು. ತಮ್ಮ ಸಾಹಿತ್ಯದುದ್ದಕ್ಕೂ ನಾಡು–ನುಡಿಗಳ ಬಗೆಗೆ ಕನ್ನಡಿಗರಲ್ಲಿ ಪ್ರೀತಿ, ಅಭಿಮಾನ ಮೂಡಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ.

'ಕಲೆಯ ಕಡುಜಾಣರ ಕೈಹಿಡಿದು ನಡೆಸುವ ಸರಸ್ವತಿಯೇ ನಮಿಸುವೆನು' (ರಾಗೌ ಸಮಗ್ರ ಕಾವ್ಯ ಪು.ಸ.63) ಎನ್ನುವ ರಾಗೌ ಅವರು ಕೂಡ ಪ್ರಾಚೀನ ಕವಿಗಳಂತೆ ತಮ್ಮ ಇಷ್ಟ ದೈವವನ್ನು ಸ್ಮರಿಸಿದ್ದಾರೆ. ಕೇಶಿರಾಜ ವಾಗ್ದೇವಿಯನ್ನು ಸ್ಮರಿಸಿದರೆ. ಕುಮಾರವ್ಯಾಸ ವೀರನಾರಾಯಣನನ್ನು ಸ್ಮರಿಸಿದ್ದಾನೆ. ಅದರಂತೆ ಈ ಲೇಖನದ ರುವಾರಿಗಳಾದ ರಾಗೌ ಅವರು ತಮ್ಮ ಸಾಹಿತ್ಯದ ವರ ದೇವತೆಯಾದ ಸರಸ್ವತಿಯನ್ನು

ನಮಿಸಿ, ಕಲೆಯನ್ನೇ ನಂಬಿರುವ ಕನ್ನಡ ನಾಡಿನ ಜಾಣರನ್ನು ಕೈಹಿಡಿದು ನಡೆಸು, ಅವರು ರಚಿಸುವಂತಹ ಕಾವ್ಯ ಕೈತಪ್ಪಿ ಹೋಗದಂತೆ ಅವರ ಬುದ್ಧಿಗೆ ಇಂಬು ನೀಡುವಂತೆ ಮಂಗಳವ ಹರಸು ಎಂದು ತಮಗೂ, ಜೊತೆಗೆ ನಾಡಿನ ಎಲ್ಲರಿಗೂ ಒಳಿತನ್ನು ಬಯಸುವಲ್ಲಿ ತನ್ನಿಷ್ಟದ ದೈವವನ್ನು ಸ್ಮರಿಸಿರುವುದು ವಿಶೇಷವಾಗಿದೆ.

ಕನ್ನಡ ನಾಡಿನಲ್ಲಿ ಜಾನಪದ ಸೊಗಡು ಎಲ್ಲೆಡೆ ಹಾಸುಹೊಕ್ಕಾಗಿದೆ. ಜಾನಪದ ಸಾಹಿತ್ಯವನ್ನು ಅಧ್ಯಯನ ಮಾಡುವಲ್ಲಿ ಕವಿಯು ಯಶಸ್ವಿಯಾಗಿದ್ದಾರೆ. ನಮ್ಮ ಪೂರ್ವಜರಲ್ಲಿ 'ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತಲೂ ಮಿಗಿಲು' ಎಂಬ ಮಾತಿದೆ. ಈ ಸಾಲುಗಳಲ್ಲಿ ಜನಪದರ ಬಗೆಗಿನ ಅಭಿಮಾನ ವ್ಯಕ್ತವಾಗಿದೆ. 'ತಾಯ್ನುಡಿ ಮತ್ತು ತಾಯ್ಮಡಿಲಿನ ಸಂತೋಷ ಒಂದು ಮಗುವಿಗೆ ಹೇಗೆ ಆಹ್ಲಾದನ್ನುಂಟು ಮಾಡುತ್ತದೆಯೋ ಹಾಗೆಯೇ ಕನ್ನಡ ಭಾಷೆ ಓದುಗರಿಗೆ ಮುದವನ್ನು ನೀಡುತ್ತದೆ. ಇದು ನನಗೆ ಸ್ವರ್ಗಕ್ಕಿಂತಲೂ ಮಿಗಿಲು ಎಂಬುದಾಗಿ ಹೇಳಿದ್ದಾರೆ:

ಕನ್ನಡವು ತಾನದು ತಾಯ್ಮಡಿಲ ತೊಟ್ಟಿಲು
ಸ್ವರ್ಗಕ್ಕೂ ಮಿಗಿಲದು ನನಗೆ
(ರಾಗೌ ಸಮಗ್ರ ಕಾವ್ಯ–ಪು.ಸ. 640)

ತಾಯಿಯನ್ನು ಪ್ರೀತಿಸಿದಂತೆ ನಮ್ಮ ಭಾಷೆಯನ್ನು ಪ್ರೀತಿಸಬೇಕು. ಅದು ನನಗೆ ಕಣ್ಬೆಳಕು. ಅದೇ ನನ್ನ ಉಸಿರು ಮತ್ತು ಬದುಕು ಎಂದಿದ್ದಾರೆ. ಇವರ ಮಾತುಗಳಿಂದ ನವೋದಯದ ಆಚಾರ್ಯ ಪುರುಷರಾದ ಬಿ.ಎಂ.ಶ್ರೀ ಅವರ ಮಾತನ್ನು ಇಲ್ಲಿ ಸ್ಮರಿಸಬಹುದು:

ಮೊದಲ ತಾಯ ಹಾಲ ಕುಡಿದು
ನಲ್ಮೆಯಿಂದ ತೊದಲು ನುಡಿದು
ಕೆಳೆಯರೊಡನೆ ಬೆಳೆದು ಬಂದ ಮಾತದಾವುದು.

ಈ ಸಾಲುಗಳಿಗೆ ಪೂರಕವಾಗಿ 'ರಾಗೌ' ಅವರು

ತಾಯಿಯ ಮೊಲೆಹಾಲ ಪ್ರೀತಿಯ ನಲವಂತೆ
ಕಣ್ಬೆಳಕು ಎದೆಯುಸಿರು ಬದುಕಿಗೆ.

ಇದರಿಂದ 'ರಾಗೌ' ಅವರಿಗೆ ತಾಯಿ ಮತ್ತು ತಾಯ್ನಾಡಿನ ಮೇಲೆ ಇರುವ ಪ್ರೀತಿ ದ್ಯೋತಕವಾಗಿ ಹರಿದಿದೆ.

ಇಂದಿನ ನಮ್ಮ ಕನ್ನಡ ನಾಡಿನಲ್ಲಿ ನಾಡು–ನುಡಿಯ ಬಗೆಗೆ ಸಾಕಷ್ಟು ಭಿನ್ನಾಭಿಪ್ರಾಯಗಳು ಕೇಳಿಬರುತ್ತಿವೆ. ಇತ್ತೀಚಿಗೆ ಜೂನ್ 03 ಮತ್ತು 04 ರಂದು ಗೂಗಲ್‌ನಲ್ಲಿ ಚರ್ಚೆಯಾದ ಸಂಗತಿಯನ್ನು ಉದಾಹರಿಸಬಹುದಾಗಿದೆ. ಅದೇನೆಂದರೆ ಗರಟುಜಣ ಟಚಿಟಿರಣಚಿರಜ ಏಟಿ ಖಟಜುಚಿ ಎಂದು ಟೈಪ್ ಮಾಡಿ ಹುಡುಕಿದರೆ ಕನ್ನಡ ಎಂದು ತೋರಿಸುತ್ತಿತ್ತು. ಈ ವಿಚಾರಕ್ಕೆ ಸಂಬಂಧಿಸಿದಂತೆ ಸಾಕಷ್ಟು ಪ್ರತಿಕ್ರಿಯೆಗಳು ಬಂದವು. ಅನ್ಯ ಭಾಷಿಕರು ಮಾಡಿದ ತಪ್ಪಿನಿಂದ ಇಡೀ ಕರುನಾಡೇ ಒಂದಾಗುವ ಸನ್ನಿವೇಶ ಬಂದೊದಗಿತು. ಇದರಿಂದ ಒಂದಿಷ್ಟು ಖುಷಿ ಎನಿಸಿತು. ಕನ್ನಡಿಗರ ಭಾವನೆಗಳಿಗೆ ಪೆಟ್ಟಾಗುವಂತಹ ಸಂದರ್ಭಗಳು ಬರದಂತೆ ನೋಡಿಕೊಳ್ಳಬೇಕು. ಕನ್ನಡ ನಾಡಿನಲ್ಲಿ ಕನ್ನಡವೇ ಸಾರ್ವಭೌಮ ಎನ್ನುವಾಗ ನಮ್ಮಲ್ಲಿಯೇ ಎಲ್ಲೋ ಒಂದು ಕಡೆ ಭಾಷಾ ಪ್ರೇಮ ಕಣ್ಮರೆಯಾಗಿದೆ. ಇದಕ್ಕೆ ಪ್ರತಿಯಾಗಿ ರಾಗೌ ತಮ್ಮ ಕಾವ್ಯದಲ್ಲಿನ ಸಾಲುಗಳಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ತನ್ನದು ನಾಡಿದು ನುಡಿಯಿದು ಎಂದೆನದಿರೆ
ಬೇರೊಬ್ಬರೆನುವರೆ ಕೇಳು
ತನ್ನ ತಾಯನೆ ತಾಯೆಂದು ಕರೆಯದಿರೆ
ಮತ್ತಾರು ಕರೆವರು ಹೇಳು.
(ರಾಗೌ ಸಮಗ್ರ ಕಾವ್ಯ, ಪು.ಸ 64)

ಈ ಮಾತುಗಳಲ್ಲಿ ನಾಡು–ನುಡಿಗೆ ಸಂಬಂಧಿಸಿದಂತೆ ಕವಿಯ ಭಾವನಾತ್ಮಕತೆ ಹೇಳತೀರದು. ಇದರಲ್ಲಿ ನಮ್ಮ ತನವನ್ನೇ ಪ್ರಶ್ನಿಸುವ ಅಂಶವಿದೆ. ಇದು ನಮ್ಮ ನಾಡು, ನಮ್ಮ ನುಡಿ ಎಂದು ನಾವೇ ಹೇಳಲಿಲ್ಲವಾದರೆ ಮತ್ತ್ಯಾರು ಅದರ ಉಳಿವಿಗಾಗಿ ಶ್ರಮಿಸುತ್ತಾರೆ ಎಂಬುದರ ಮೂಲಕ ಕನ್ನಡಿಗರ ಸ್ವಾಭಿಮಾನವನ್ನು ಕೆಣಕಿದ್ದಾರೆ. ಸ್ವಂತ ಮಗನೇ ತನ್ನ ತಾಯಿಯನ್ನು ತಾಯಿ ಎಂದು ಕರೆಯದಿದ್ದರೆ ಮತ್ತ್ಯಾರು ಕರೆವರು ಎನ್ನುವ ಮೂಲಕ ಹೆತ್ತತಾಯಿಗೆ ನಾಡು–ನುಡಿಯನ್ನು ಸಮೀಕರಿಸಿ ಕರುಳಬಳ್ಳಿಯ ಸಂಬಂಧವನ್ನು ಹೆಣೆದಿರುವುದು ಮನಮುಟ್ಟುವಂತಿದೆ. ಅಷ್ಟೇ ಅಲ್ಲದೆ ನಾಡಿನ ಉದಯದ ಆರಂಭದ ದಿನಗಳಲ್ಲಿ ಬೆನಗಲ್ ರಾಮರಾಯರು ಒಂದು ಮಾತನ್ನು ಹೇಳಿದ್ದರು. ಅದೇನೆಂದರೆ ಕನ್ನಡವನುಳಿದೆನಗೆ ಅನ್ಯ ಜೀವನವಿಲ್ಲ ಎಂದು, ಆದರೆ ರಾಗೌ "ಕನ್ನಡವೆನದಿರೆ ಮಾತಿಲ್ಲ ಮನಸಿಲ್ಲ ಉದ್ಧಾರವೆಂಬುದು ಅತಿದೂರ" ಎಂಬುದರ ಮೂಲಕ ತನ್ನುದ್ದಕ್ಕೂ ಕನ್ನಡವೇ ತುಂಬಿದೆ ಎಂಬ ಆಂತರ್ಯವನ್ನು ಹೊಂದಿದ ಕನ್ನಡಿಗ ರಾಗೌ.

ಇವರ ಸಾರವತ್ತಾದ ಸಾಹಿತ್ಯದಲ್ಲಿ ಕನ್ನಡದ ಪ್ರಾಚೀನತೆಯನ್ನು ಕುಲಂಕಷವಾಗಿ ಗಮನಿಸಿರುವ ಉಲ್ಲೇಖಗಳಿವೆ. ಕ್ರಿ.ಶ.850ರ ಕವಿರಾಜಮಾರ್ಗಕಾರ ಕನ್ನಡ ನಾಡಿನ ಸೀಮೆಯನ್ನು 'ಕಾವೇರಿಯಿಂದ ಗೋದಾವರಿಯವರಮಿರ್ದಾ ನಾಡದ ಕನ್ನಡದೊಳ್' ಎಂದು ಹೇಳಿ ನಾಡಿನ ಗಡಿಯನ್ನು ಎರಡು ನದಿಗಳ ಮೂಲಕ ಸೂಚಿಸಿದ್ದಾರೆ. ಆದರೆ ರಾಗೌ ನಾಡಿನುದ್ದಕ್ಕೂ ಸಂಚರಿಸಿ ಅಲ್ಲಿನ ಪ್ರಕೃತಿ ಸೌಂದರ್ಯವನ್ನು ಸವಿದಿರುವುದುದಲ್ಲದೆ ಗಂಗೆ, ತುಂಗೆ, ಯಮುನೆ, ಕ್ರಿಷ್ಣೆ, ತಪತಿ, ಗೋದಾವರಿ, ನರ್ಮದಾ, ಕಪಿಲೆ, ಕಾವೇರಿ, ಶರಾವತಿ ಮುಂತಾದ ನದಿಗಳ ಹೆಸರನ್ನು ತಮ್ಮ ಕಾವ್ಯದಲ್ಲಿ ಬಳಸಿದ್ದಾರೆ, ಜೊತೆಗೆ ಈ ನದಿಗಳು ನಾಡಿನ ಜನರಿಗೆ ಮತ್ತು ಬೇರೆಯವರಿಂದ ನಮ್ಮ ನಾಡಿಗೆ ಅಂಟಿರುವ ಕೊಳೆಯನ್ನು ತೊಳೆದು ಹೊಸ ಚೈತನ್ಯವನ್ನು ಮೂಡಿಸುವ ನಿಟ್ಟಿನಲ್ಲಿ 'ತೊಳೆಯಲಿ ಕೊಳೆಯ ಸರ್ವದಾ' ಎಂಬಂಥ ಸಾಲುಗಳು ನಾಡಿನಲ್ಲಿ ನಿಸರ್ಗಕ್ಕಾಗುತ್ತಿರುವ ಅನ್ಯಾಯವನ್ನು ಚಿತ್ರಿಸಿ, ಅದರಿಂದ ಜನರೇ ಅಸಹಾಯಕ ಬದುಕನ್ನು ಸಾಗಿಸುತ್ತಿದ್ದಾರೆ. ದುರಾಸೆಯಿಂದ ಪ್ರಕೃತಿಯನ್ನು ನಾಶಮಾಡಿ ಮೆರೆಯುತ್ತಿರುವ ಜನರು ಮುಂದೊಂದು ದಿನ ಪ್ರಕೃತಿಗೆ ಮೊರೆ ಹೋಗುವ ಸಂದರ್ಭ ಬಂದೇ ಬರುತ್ತದೆ ಎಂಬ ಮೂನ್ಸೂಚನೆಯನ್ನು ನೀಡುವುದಾಗಿದೆ.

ನಾಡಿನ ರಾಜಕೀಯ ಸನ್ನಿವೇಶವನ್ನು ತಿಳಿಸುವ ನಿಟ್ಟಿನಲ್ಲಿ 'ಪ್ರಜೆ ಮತ್ತು ಪ್ರಭು' ಎನ್ನುವಂತಹ ಕವನದಲ್ಲಿ ಹಿಂದಿನಿಂದ ಬೆಳೆದುಕೊಂಡು ಬಂದಿರುವ ರಾಜಕಾರಣವನ್ನು ಹಾಗೂ ರಾಜಕಾರಣಿ ಮತ್ತು ಪ್ರಜೆಗಳ ನಡುವಿನ ಸಂಬಂಧವನ್ನು ವ್ಯಂಗ್ಯಾತ್ಮಕವಾಗಿ ಚಿತ್ರಿಸಿದ್ದಾರೆ.

ಪ್ರಜೆ ಮತ್ತು ಪ್ರಭುವಿನ ಸಂಬಂಧ ಯಾವಾಗ ದ್ವಿಗುಣವಾಗುತ್ತದೆ ಎಂಬುದನ್ನು ಹಾಸ್ಯಸ್ಪದವಾಗಿ ವಿವರಿಸಿದ್ದಾರೆ. ಐದು ವರ್ಷಕ್ಕೊಮ್ಮೆ ಬರುವ ಚುನಾವಣೆಯಲ್ಲಿ ಓಟಿನ ಹಕ್ಕಿನಿಂದ ಪ್ರಜೆ ಪ್ರಭುವಾಗುತ್ತಾರೆ. ಆ ಸಮಯದಲ್ಲಿನ ಪ್ರಜೆಗಳ ವರ್ತನೆಯನ್ನು ಹೇಳುವಾಗ, ರಾಮ ಸೇವಕರಂತೆ ಕಾಲಡಿಯಲ್ಲಿ ಕುಳಿತ ರಾಜಕಾರಣಿಗಳಿಗೆ

ತಿಂದುದೆಲ್ಲವನ್ನು ಕಕ್ಕಿಬಿಡು ಎಂದಾಗ ರಾಜಕಾರಣಿಯಿಂದ ಎತ್ತರಮುಖಿಯಾಗಿ ಉತ್ತರ ತಿರುಗುತ್ತದೆ ಎಂಬ ಸತ್ಯವನ್ನು ಅರಿತು ಪ್ರಜೆಗಳನ್ನು ಕುರಿತು ಕುಶಲತೋಪುಗಳನ್ನು ಹಾರಿಸಿ, ಅವರ ಮಾತುಗಳಿಂದಲೇ ಪ್ರಜೆಗಳಿಗೆ ಕೈಲಾಸವನ್ನು ತೋರಿಸುವ ರಾಜಕಾರಣಿಗಳು, ಅನಂತರ ಚುನಾವಣೆಯಲ್ಲಿ ಗೆದ್ದು ಅಧಿಕಾರ ಸ್ವೀಕರಿಸಿದಾಗ ಪ್ರಭುವಿನ ಸ್ವಭಾವನ್ನು ಗಮನಿಸಿ ಐದು ವರ್ಷಕ್ಕಾದರು ಬನ್ನಿ ಸ್ವಾಮಿ ತಪ್ಪದೇ ಕಾದಿರುತ್ತೇವೆ ಶಬರಿಯಂತೆ ತೆಪ್ಪಗೆ. ಎನ್ನುವ ಮಾತುಗಳಲ್ಲಿ ನಾಡಿನ ರಾಜಕೀಯದ ವ್ಯಂಗ್ಯವಿದೆ. ಯಾವುದೇ ಸರ್ಕಾರಗಳು ಅಧಿಕಾರಕ್ಕೆ ಬರುವ ಮುಂಚೆ ಸಾಕಷ್ಟು ಅಶ್ವಾಸನೆಗಳನ್ನು ಕೊಟ್ಟು ಮನವೊಲಿಸುತ್ತಾರೆ. ಆದರೆ ಚಾಳಿಯಂತೆ ನಡೆಗು–ನುಡಿಗು ಸಂಬಂಧವೇ ಇಲ್ಲವೇನೋ ಎಂಬಂತೆ ಐಷಾರಾಮಿ ಜೀವನದಲ್ಲಿ ಐದು ವರ್ಷ ಕಳೆದರೂ ಯಾವುದೇ ಜನಪರ ಕೆಲಸ ಮಾಡದೆ, ನಾಡಿನ ಜನರ ನೋವಿಗೆ ಮಿಡಿಯದೆ ಮತ್ತದೇ ಐದು ವರ್ಷಕ್ಕೆ ಅವರ ಮುಂದೆ ನಿಲ್ಲುವ ಪ್ರಭುಗಳ ಸನ್ನಿವೇಶವನ್ನು ವರ್ಣಿಸಿದ್ದಾರೆ.

ಹೀಗೆ ಪ್ರಜೆ ಪ್ರಭು ಆಡಿದ ನಾಟಕಕ್ಕೆ
ಹೆಸರು ಪ್ರಜಾಪ್ರಭುತ್ವ
ಗುರಿ ತೋರದೆ ಸದಾ ಬೆಯುತ್ತದೆ
ನಮ್ಮ ನಾಡಿನ ಅಂತಃಸತ್ವ
(ರಾಗೌ ಸಮಗ್ರ ಕಾವ್ಯ. ಪು.ಸ.140)

ಎಂಬ ಮಾತಿನಲ್ಲಿ ಕವಿಗೆ ನಾಡಿನ ಬಗೆಗಿನ ಕಾಳಜಿ, ಅಭಿವೃದ್ಧಿ, ರಾಜಕೀಯ ಮತ್ತು ಜನತೆಯ ಜೀವನವನ್ನು ಕುರಿತ ನಿರಾಸೆ ಇಲ್ಲಿ ವ್ಯಕ್ತವಾಗುತ್ತದೆ.

ಕನ್ನಡಿಗರ ಜೀವನ ಹೇಗಿರಬೇಕು, ತಮ್ಮ ರಕ್ಷಿಸಿಕೊಳ್ಳುವ ಬಗೆಯಾದರೂ ಹೇಗೆ? ಎಂಬುದನ್ನು ಹೇಳುವಾಗ 'ಮಳೆ ಬಂದ ಕಡೆ ಕೊಡೆ ಹಿಡಿಯುವ ಹಾಗೆ' ಕಾಲಕ್ಕೆ ತಕ್ಕಂತೆ ಕಲಿಯಾಗಬೇಕು. ನಮ್ಮ ಒಳಿತನ್ನು ಬಯಸುವವರಿಗೆ ಬಾಗಿ ನಡೆಯಬೇಕು, ಎದುರಾಳಿಗಳಿಗೆ ಎದೆಗುಂದದೆ ಎದೆಯೊಡ್ಡಿ ತಮ್ಮನ್ನು ತಾವೇ ರಕ್ಷಿಸಿಕೊಳ್ಳಬೇಕು. ಇಲ್ಲವಾದರೆ ನಾಡಿನಲ್ಲಿ ಜೀವನ ನಿರ್ವಹಣೆ ಕಷ್ಟ ಎಂದು ಸಮಕಾಲೀನ ಸಂದೇಶವನ್ನು ವಾಸ್ತವದ ನೆಲೆಗಟ್ಟಿನಲ್ಲಿ ಆತ್ಮವಿಶ್ವಾಸವನ್ನು ತುಂಬುವ ಇವರ ಬರವಣಿಗೆಗಳು ಸ್ಮರಣೀಯವಾಗಿವೆ.

'ಸಂಭವಾಮಿ ಯುಗೇ ಯುಗೇ' ಎಂಬ ಕವನದಲ್ಲಿ ನಾಡಿನ ಪರಿಸ್ಥಿತಿಯನ್ನು ತಮ್ಮ ಕನಸಿನಲ್ಲಾದ ಅನುಭವದ ಮೂಲಕ ವ್ಯಕ್ತಪಡಿಸಿದ್ದಾರೆ. ಈ ಧರೆಗೆ ಎಷ್ಟೇ ಅವತಾರಗಳು ಎತ್ತಿ ಬಂದರೂ ಮತ್ತದೇ ಅಂದಕಾರ, ಇದನ್ನು ಸರಿಪಡಿಸಲು ಸಾಕಷ್ಟು ಜ್ಞಾನ ಮೂಲಗಳಿದ್ದರು ನಮ್ಮ ಜನರ ಹೃದಯದಲ್ಲಿ ಬೆಳಕಾಗಿಲ್ಲ. ಯಾವುದು ಸರಿ, ಯಾವುದು ತಪ್ಪು ಎಂಬುದರ ಗೊಂದಲದಲ್ಲಿಯೇ ಜೀವನ ಕಳೆಯುತ್ತಿದ್ದಾರೆ. ಇದಕ್ಕೆ ಉತ್ತರವೇನು ? ಇದನ್ನು ಸರಿದಾರಿಗೆ ತರಲು ಸಾಧ್ಯವಿಲ್ಲವೇ? ಎಂಬುದರಲ್ಲಿಯೇ ಇದ್ದೇವೆ. ಮುಖ್ಯವಾಗಿ ಈ ತಂತ್ರಜ್ಞಾನದ ನಾಗಲೋಟದಲ್ಲಿ ಯಂತ್ರಗಳೊಂದಿಗೆ ಸೆಣಸಾಡಿ ಬದುಕುತ್ತಿದ್ದೇವೆ. ಇದರ ನಡುವೆ ಮೌಲ್ಯಗಳಾಗಲಿ, ನೈತಿಕತೆಯಾಗಲಿ ಇಲ್ಲವಾಗಿವೆ. ಇಂಥಹ ದುರ್ಗಮ ಪರಿಸ್ಥಿತಿಯಲ್ಲೂ ಅನುಭವವೇ ಇಲ್ಲದೆ ಸತತ ಸೋಲನ್ನು ಕಾಣುತ್ತಿರುವ ಸಮಾಜವನ್ನು ನೋಡಿ ಬೇಸರವನ್ನು ವ್ಯಕ್ತಪಡಿಸಿದ್ದಾರೆ.

'ಜಾಲ' ಎಂಬ ಕವನದಲ್ಲಿ ಮೇಲಿನ ವಿಷಯಕ್ಕೆ ಪೂರಕವಾಗುವಂತೆ ಮನುಷ್ಯನ ದುರಾಸೆಯಿಂದ ನಾಡಿನ ಅವ್ಯವಸ್ಥೆಯನ್ನು ಕುರಿತು ಚಿಂತಿಸಿದ್ದಾರೆ.

'ಕಿತ್ತಹಾಗೆ ಕತ್ತೆತ್ತುತ್ತಲೇ ಇರುವ ಪಾರ್ಥೇನಿಯಂ ಕಳೆ;
ಭೂವನಿತೆಗಾದ ಗರ್ಭಪಾತ, ಬಿತ್ತಿದ ಬೆಳೆಗೆ ಭಯವಿಲ್ಲ'

ರಾಗೌ ಅವರ ಬರಹಗಳು ನಾಡಿನ ಜನರ ಜೀವನದ ಬಗ್ಗೆ, ಭಾಷೆ ಮತ್ತು ರಾಜಕೀಯ ವಿಷಯಗಳನ್ನಷ್ಟೇ ಅಲ್ಲದೆ ಕನ್ನಡ ನಾಡಿನ ಸ್ವಾಸ್ಥ್ಯವನ್ನು ಕಾಪಾಡಲು ತಮ್ಮ ಜೀವನವನ್ನೇ ಮುಡಿಪಿಟ್ಟವರ ಬಗ್ಗೆ ಮತ್ತು ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಲು ಹಗಲು–ರಾತ್ರಿ ದುಡಿದ ಸಮಾಜ ಸುಧಾರಕರು ಮತ್ತು ಕವಿಗಳನ್ನು ಸ್ಮರಿಸುವಂತಹ ಕೆಲಸವನ್ನು ಮಾಡಿದ್ದಾರೆ. ಅದರಲ್ಲಿ ಇವರ ಸಾಹಿತ್ಯ ಭೂಮಿಕೆಯಿಂದ ಬಂದಂಥಹ ಬಸವಣ್ಣ, ಪುರಂದರದಾಸರು, ಕುವೆಂಪು, ಕಾರಂತ ಮತ್ತು ಪು.ತಿ.ನರಂಥ ಸಾಹಿತ್ಯ ಚೇತನಗಳನ್ನು ಕುರಿತು ತಮ್ಮ ಅನುಭವದ ವ್ಯಾಪ್ತಿಯಲ್ಲಿ ಅವರ ಸಾಧನೆಯನ್ನು ಕಾವ್ಯದಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ.

'ಬಸವೇಶ್ವರ' ಎಂಬ ಶೀರ್ಷಿಕೆಯಡಿಯಲ್ಲಿ ಹನ್ನೆರಡನೆಯ ಶತಮಾನದ ಕಾಯಕಯೋಗಿ, ಶರಣಶ್ರೇಷ್ಠ ಬಸವಣ್ಣನವರ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ. ಕವನದ ಆರಂಬದಲ್ಲಿಯೇ 'ಕನ್ನಡ ನೆಲದ ಕಲ್ಪವೃಕ್ಷವಾಗಿ ಧರೆಗೆ ಸ್ವರ್ಗವನ್ನೇ ಕರೆದಂಥ ವೀರ' (ರಾಗೌ ಸ.ಕಾ.ಪು.ಸ 206) ಎಂಬ ಮಾತಿನಲ್ಲಿ ಆ ಕಾಲಘಟ್ಟದ ಸಾಮಾಜಿಕ ಕ್ರಾಂತಿಯ ಹರಿಕಾರರಾದ ಬಸವಣ್ಣನವರ ಶ್ರೇಷ್ಠತೆಯನ್ನು ತಿಳಿಸಿದ್ದಾರೆ. ತನ್ನ ಶ್ರೇಷ್ಠ ಭಕ್ತಿಯ ಮೂಲಕ ಅಂದಿನ ಸಮಾಜವನ್ನು ನಿಬ್ಬೆರಗಾಗಿಸಿದ ದೈತ್ಯಸೂರ್ಯ, ಇಡೀ ಜಗತ್ತಿಗೆ ಬೆಳಕು ನೀಡಿದವರಲ್ಲದೆ, ಪ್ರತಿಯೊಬ್ಬರ ಹೃದಯಕ್ಕೂ ಬೆಳಕು ಚೆಲ್ಲಿದ ಮಹಾಪುರುಷ ಬಸವಣ್ಣ ಎಂದಿದ್ದಾರೆ.

ಬಸವಣ್ಣನವರ ವ್ಯಕ್ತಿತ್ವವನ್ನು ವರ್ಣಿಸಲು ಇಡೀ ಜಗತ್ತನ್ನೇ ತನ್ನ ಹೆಡೆಯ ಮೇಲೆ ಹೊತ್ತಿರುವ ಆದಿಶೇಷನಿಗೂ ಆಯಾಸವಂತೆ. ಅದು ನಿಜವೂ ಕೂಡ. ಯಾರು ಊಹಿಸಲಾಗದ ಕೆಲಸವನ್ನು ಮಾಡಿ ಸಮಾಜವನ್ನು ತಿದ್ದುವ ಕಾರ್ಯದಲ್ಲಿ ಅವರ ಬದುಕು ಇತಿಹಾಸದ ಪುಟಗಳಲ್ಲಿ ನಿಜಕ್ಕೂ ಅಮರ, ನೀನೊಬ್ಬ ಕಾರಣ ಪುರುಷ, ಪ್ರತಿಯೊಬ್ಬರ ಜೀವನದಲ್ಲಿ **'ಮತ ಮುಖ್ಯವಲ್ಲ ಮನಸ್ಸೇ ಮುಖ್ಯ'** ಎಂದು ತೋರಿಸಿಕೊಟ್ಟ ಮಹಾನ್ ಮಾನವತವಾದಿ. ಜಾತಿ, ಮತ, ಧರ್ಮ, ಮೇಲು–ಕೀಳುಗಳ ನಡುವೆ ಸೇತುವೆ ಕಟ್ಟಿ ಎಲ್ಲರೂ ಸಮಾನರು ಎಂಬ ಸಮಾನತೆಯ ಬೀಜ ಬಿತ್ತಿದ ಸಮಾಜ ಸುಧಾರಕ. ಬಸವಣ್ಣ ಶಿವನ ಸ್ವರೂಪವೇ ಎಂದು ರಾಗೌ ಬಸವಣ್ಣನವರನ್ನು ಕುರಿತ ತಮ್ಮ ಮನದಾಳದ ಮಾತನ್ನು ವ್ಯಕ್ತಪಡಿಸಿದ್ದಾರೆ.

ವಚನವೇದದ ತುಂಬಾ ಬಾಳ ಭಗವದ್ಗೀತೆಯನೊರೆದ ಭಗವಂತ. ಇಷ್ಟೆಲ್ಲಾ ಹೇಳಿದರೂ ಕೂಡ ನಿನ್ನಂಥ ಅದ್ಭುತ ವ್ಯಕ್ತಿತ್ವವನ್ನು ಅರ್ಥಮಾಡಿಕೊಳ್ಳಲಾಗಲಿಲ್ಲ ಎಂಬ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಏನೇ ಬದಲಾವಣೆ ಬಯಸಿದರು ಮೊದಲು ಅದು ತನ್ನಲ್ಲಿ ಜಾಗೃತವಾಗಬೇಕು ಎಂದುಕೊಂಡಿದ್ದವರು. ಕಾಯಕವೇ ಕೈಲಾಸ ಎನ್ನುವುದರ ಮೂಲಕ ಶ್ರೀಸಾಮಾನ್ಯನಿಗೂ ಕಾಯಕತತ್ವವನ್ನು ತಿಳಿಸಿದವರು ಬಸವಣ್ಣ. ಒಂದು ಧರ್ಮಕ್ಕೆ ಸೀಮಿತವಾಗಿರದೆ, ಕರುನಾಡಿನಲ್ಲಿ ಮಾತ್ರವಲ್ಲದೆ ವಿಶ್ವವ್ಯಾಪಿಯಾಗಿ ತನ್ನ ತತ್ವ ಚಿಂತನೆಗಳ ಮೂಲಕ ಅವಿಸ್ಮರಣೀಯರಾಗಿದ್ದಾರೆ. ವಿಶ್ವಸಾಹಿತ್ಯಕ್ಕೆ ವಚನ ಸಾಹಿತ್ಯದ ಕೊಡುಗೆ ಅಮೂಲ್ಯವಾದುದು. ಅದರ ಸಿಂಹಪಾಲು ಬಸವಣ್ಣನವರೆ. ಇವರು ಕನ್ನಡ ಸಾಹಿತ್ಯದ ಕಂಪನ್ನು ನಾಡಿನಾದ್ಯಂತ ಪಸರಿಸಿದ್ದಾರೆ.

ನಾಡು ಕಂಡ ದಾಸಶ್ರೇಷ್ಠರು. ತಮ್ಮ ಕೀರ್ತನೆಗಳ ಮೂಲಕ ಕರುನಾಡಿನ ಮನೆ–ಮನಗಳಲ್ಲಿ ಉಳಿದಿರುವ ಪುರಂದರದಾಸರನ್ನು ಕುರಿತು ರಾಗೌ ಅವರು 'ಪುರಂದರದಾಸರು' ಎಂಬ ಕವನದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನೆಲ ಮುಗಿಲಿಗು ತಂತಿ ಸೇತುವೆ ಕಟ್ಟಿ
ಹಿಡಿದ ತಂಬೂರಿಯಿಂದ ಹರಿದ ಪೂರ
(ರಾಗೌ ಸ.ಕಾ.ಪು.ಸ.165)

ನಾಡಿನ ಜನರ ನಡುವೆ ಸೇತುವೆಯಾಗಿನಿಂತ ದಾಸವಾಙ್ಮಯ ಸೂರ್ಯ ಪುರಂದರಾರ್ಯ. ತಂಬೂರಿಯನ್ನು ಹಿಡಿದು ಸ್ವತಃ ತಾನೇ ರಚನೆ ಮಾಡಿದ ಕೀರ್ತನೆಗಳನ್ನು ನಾಡಿನುದ್ದಕ್ಕೂ ಹಾಡುತ್ತಾ ಸಾಮಾಜಿಕ ಪಿಡುಗುಗಳ ವಿರುದ್ಧ ಧನಿ ಎತ್ತಿದ 16ನೇ ಶತಮಾನದ ಸಮಾಜ ಸುಧಾರಕರೆಂದರೆ ಪುರಂದರದಾಸರು.

ಪಾಚಿ ಕಟ್ಟಿದ ನಾಡಿನ ಜನರ ಹೃದಯವನ್ನು ತೊಳೆದ ಜಲಗಾರ. ದಾಸರ ಪ್ರಮುಖ ಕೀರ್ತನೆಯಲ್ಲೊಂದಾದ 'ಈಸಬೇಕು ಇದ್ದು ಜಯಿಸಬೇಕು' ಎಂಬುದರಿಂದ ಅದೇಷ್ಟೋ ಜನರು ತಮ್ಮ ಜೀವನವೇ ನಶ್ವರ ಎಂಬ ಭಾವನೆಯಿಂದ ಬದುಕನ್ನೇ ಶೂನ್ಯವಾಗಿಸಿಕೊಂಡಿದ್ದವರ ಬದುಕಿನಲ್ಲಿ ಬೆಳಕಾದರು. ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ದಾಸರ ಕೊಡುಗೆ ಅಮೂಲ್ಯ. ಹೇರಳವಾಗಿ ಭಕ್ತಿ ಗೀತೆಗಳನ್ನು ರಚಿಸಿ ಜನಸಾಮಾನ್ಯರಿಗೂ ಕನ್ನಡ ಸಾಹಿತ್ಯದಲ್ಲಿ ಚಿರವಾದ ಬೆಸುಗೆಯನ್ನು ಉಂಟುಮಾಡಿದ ಹಿರಿಯ ವ್ಯಕ್ತಿಗಳಲ್ಲಿ ಒಬ್ಬರಾಗಿರುವ ಪುರಂದರದಾಸರನ್ನು ತಮ್ಮ ಸಾಹಿತ್ಯದಲ್ಲಿ ನೆನೆದಿರುವುದು ಸಾಹಿತ್ಯಕ್ಕೆ ಔಚಿತ್ಯಪೂರ್ಣವಾಗಿದೆ.

ಮುಂದುವರೆದು ರಾಗೌ ಕುವೆಂಪು ಅವರ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ. ಆಡು ಮುಟ್ಟದ ಸೊಪ್ಪಿಲ್ಲ, ಕುವೆಂಪು ರಚನೆ ಮಾಡದ ಸಾಹಿತ್ಯ ಕ್ಷೇತ್ರವಿಲ್ಲ ಎಂಬ ಮಾತಿನಂತೆ ಗೊಬ್ಬರದ ಮೇಲೂ ಕವಿತೆ ಬರೆದ ಸಾಹಿತಿ ಕುವೆಂಪುರವರು. ರನ್ನ, ಕುಮಾರವ್ಯಾಸ ಮತ್ತು ಪುರಂದರದಾಸರನ್ನು ಹಾಡಿಹೊಗಳಿದ್ದಾರೆ. ಆದರೆ ಕುವೆಂಪು ಸಾಧನೆಯನ್ನು ಕುರಿತು ಅವರ ವ್ಯಕ್ತಿತ್ವವನ್ನು ವರ್ಣಿಸುವ ನಿಟ್ಟಿನಲ್ಲಿ ಬರೆದವರು ಅಸಂಖ್ಯ. ಹೊಸ ತಲೆಮಾರಿನ ಕವಿಗಳೆಲ್ಲಾ ಇವರನ್ನು ನೆನೆಯದೆ ಮುಂದೆ ಹೋಗಿಲ್ಲ. ಹಾಗೆಂದ ಮಾತ್ರಕ್ಕೆ ಸಾಹಿತ್ಯ ರಚನೆ ಬರುವುದೇ ಇಲ್ಲ ಎಂದಲ್ಲ. ವಾಡಿಕೆಯಂತೆ ಹಿರಿಯರನ್ನು ಪ್ರೇರಣೆಗಾಗಿ ಸ್ಮರಿಸಿ ಮುಂದೆ ಹೋಗುವುದಾಗಿದೆ. ಇದರಲ್ಲಿ ರಾಗೌ ಕೂಡ ಹೊರತಾಗಿಲ್ಲ.

ಸುಮಾರು ಎರಡು ಕವನದಲ್ಲಿ ಕುವೆಂಪು ಅವರನ್ನು ಕುರಿತ ವಿಚಾರಗಳು ಚರ್ಚೆಯಾಗಿದೆ. ಒಂದು 'ಕುವೆಂಪು' ಎಂಬ ಶೀರ್ಷಿಕೆಯಲ್ಲಿ ಮೂಡಿಬಂದರೆ ಮತ್ತೊಂದು 'ಕುವೆಂಪು ಸ್ಮರಣೆ' ಎಂಬುದಾಗಿ ವಿವರಿಸಿದ್ದಾರೆ.

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ರನ್ನ ಪಂಪನನ್ನು ನೆನೆಯುವಲ್ಲಿ 'ಗುಣಕ್ಕೆ ಮಚ್ಚರಂವುಂಟೆ' ಎಂಬ ಮಾತನ್ನು ಬಳಿಸಿದ್ದಾರೆ. ಈ ವಾಕ್ಯ ಉತ್ತಮರನ್ನು ನೆನೆಯಲು ಯಾವುದೇ ಮತ್ಸರಬೇಡ ಎನ್ನುವುದಾಗಿದೆ.

ಪ್ರಸ್ತುತ ಕವನದಲ್ಲಿ ರಾಗೌ ಕುವೆಂಪು ಅವರನ್ನು ಕುರಿತು:

ನಿಮ್ಮನ್ನು ಕುರಿತೇನು ಹಾಡಲಿ; ನೀವು ಗೊಮ್ಮಟ ಸಮ
ಕುಬ್ಜತೆಗಳಡವದ ವ್ಯಕ್ತಿತ್ವ ಗರುಡ ! ಸೂರ್ಯನಿಗೆ
ಸೊಡರ ಹಂಗುಂಟೆ ? ಪರಿಶುದ್ಧ ಹೇ ದವಳ ಮೂರ್ತಿ.
(ರಾಗೌ.ಸ.ಕಾ.ಪು.ಸ 293)

ಎಂಬಿತ್ಯಾದಿ ಮಾತುಗಳಲ್ಲಿ ಕುವೆಂಪು ಅವರದು ಊಹೆಗೂ ನಿಲುಕದ ವ್ಯಕ್ತಿತ್ವ, ಗೊಮ್ಮಟೇಶ್ವರ ಉತ್ತರದಲ್ಲಿದ್ದರೆ, ಕುವೆಂಪು ಸಾಹಿತ್ಯ ಗೊಮ್ಮಟನನ್ನೇ ಮೀರಿಸುವಂತಹದು. ಸಾಹಿತ್ಯ ವಿಸ್ತಾರತೆಯಲ್ಲಿ ಗರುಡನನ್ನು ಮೀರಿಸಿದ್ದಾರೆ. ಗರುಡಕ್ಕೆ ತಾನು ಆಕಾಶದಲ್ಲಿ ಹಾರಾಡುವಾಗ ಯಾವುದೇ ಎಲ್ಲೆಯ ಪರಿಮಿತಿ ಇರುವುದಿಲ್ಲ. ಅದರಂತೆ ಕುವೆಂಪು ಸಾಹಿತ್ಯಕ್ಕೆ ನಿಗದಿತವಾದ ಎಲ್ಲೆ ಇಲ್ಲ. ಇದೊಂದು ಧವಳಮೂರ್ತಿಯ ಸ್ವರೂಪ. ಸಾಹಿತ್ಯದಲ್ಲಿ ಸೂರ್ಯನಷ್ಟೇ ಪ್ರಕಾಶಮಾನವಾದ ತೇಜಸ್ಸುಳ್ಳ ತೇಜಸ್ವಿ. ಮಲೆನಾಡಿನಲ್ಲಿ ಜನಿಸಿ ಅಲ್ಲಿನ ವೈವಿಧ್ಯಮಯ ಪ್ರಕೃತಿಯ ಮಡಿಲಲ್ಲಿ ಮಿಂದುಬಂದ ಆಕೃತಿಗೆ ಲೋಕವೇ ಬೆರಗಾಯ್ತು.

ಮರೆಯಲಾರೆನು ಕಣಾ ನಿನ್ನ ರಾಮಾಯಣ ದರ್ಶನವಾ
ಹುಸಿಯಾಗದ ರಾಮಬಾಣದ ಹಾಗೆ
ಹುಸಿಯಲ್ಲ ನಿನ್ನ ರಾಮಾಯಣ ಕೂಡ.
(ರಾಗೌ ಸ.ಕಾ.ಪು.ಸ.517)

ಈ ಮೇಲಿನ ಸಾಲುಗಳಲ್ಲಿ ರಾಮಾಯಣದ ನಿರೂಪಣೆಯ ವಿಶೇಷತೆ ಅಡಗಿದೆ. ರಾಮನ ಬಾಣ ಹೇಗೆ ಗುರಿ ತಪ್ಪುವುದಿಲ್ಲವೋ. ಹಾಗೆ ಕುವೆಂಪು ಹೇಳಿರುವ ರಾಮಾಯಣದಲ್ಲಿ ಹುಸಿಯಿಲ್ಲ. ಗುತ್ತಿ–ತಿಮ್ಮಿಯರ ಪ್ರಣಯ ಪ್ರಸಂಗ, ಐತ–ಪಿಂಚಲುವಿನ ದಾಂಪತ್ಯವನ್ನು ಸ್ಮರಿಸುವ ಮೂಲಕ ಮಲೆಗಳಲ್ಲಿ ಮದುಮಗಳು ಕಾದಂಬರಿಯನ್ನು ಸ್ಮರಿಸಿದ್ದಾರೆ. ಇದು ಕನ್ನಡಕ್ಕೆ ವಜ್ರರಕ್ಷೆ ಇದನ್ನು ಪಡೆದ ನಾವೇ ಧನ್ಯ. ಮುಂದಿನ ಪೀಳಿಗೆಯ ಕನ್ನಡ ಮಕ್ಕಳ ಮನಸ್ಸಿನಲ್ಲಿ ಕುವೆಂಪು ಹೆಸರು ಅಮರವಾಗಲಿ, ಇವರದೊಂದು ಸತ್ಯ ದರ್ಶನ. ಇವರ ಬಾಳ ಪಥದಲ್ಲಿ, ಕನ್ನಡ ಕಟ್ಟುವ ಕಾಯಕದಲ್ಲಿ ನಾವೆಲ್ಲರೂ ಸಾಗಬೇಕು ಎಂಬುದು ಇವರ ಸಂದೇಶವಾಗಿದೆ.

'ಕಾರಂತರಿಗೊಂದು ನಮನ' ಎಂಬ ಕವನದಲ್ಲಿ ಶಿವರಾಮ ಕಾರಂತರಿಗೆ ನಮಿಸುವ ಕಾರ್ಯ ಸಾಗಿದೆ. ಅದರಂತೆ ಕಡಲತೀರದ ಬಾರ್ಗವ, ನಡೆದಾಡುವ ವಿಶ್ವಕೋಶ ಎಂಬುದಾಗಿ ಜನಜನಿತರಾಗಿರುವ ಕಾರಂತರನ್ನು ಮತ್ತು ಅವರ ಸಾಹಿತ್ಯವನ್ನು ತಮ್ಮದೇ ಮಾತುಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ಗೆಜ್ಜೆ ಕಟ್ಟಿ ಕುಣಿದು ಕುಪ್ಪಳಿಸಿ
ಮರೆತವರು ವ್ಯಕ್ತಿಗತ ದುಃಖವನ್ನು
ಮತ್ತೆ ಒಂಟಿತನದ ಬೇಸರಿಕೆಯನ್ನು.
(ರಾಗೌ ಸ.ಕಾ.ಪು.ಸ.369)

ಈ ಸಾಲುಗಳ ಮೂಲಕ ಕಾರಂತರು ಯಕ್ಷಗಾನ ಕ್ಷೇತ್ರಕ್ಕೆ ಕೊಟ್ಟ ಕೊಡುಗೆಯನ್ನು ಸ್ಮರಿಸಿದ್ದಾರೆ. ಇದರಿಂದ ಕಾರಂತರು ಸಾಹಿತ್ಯಕ್ಕಷ್ಟೇ ಅಲ್ಲದೆ ಕನ್ನಡಿಗರ ಜೀವನಕ್ಕೂ ಸ್ಮರಣೀಯ. ಇವರ ಯಕ್ಷಗಾನ–ಬಯಲಾಟ ಕೃತಿ ಪ್ರಸಿದ್ಧವಾದದ್ದು. ಸ್ವತಃ ಕಾರಂತರೆ ಯಕ್ಷಗಾನ ಕಲಾವಿದರಾಗಿದ್ದರು. ಸಾಮಾನ್ಯವಾಗಿ 96 ವರ್ಷ ಜೀವಿಸುವುದು ಸುಲಭದ ಮಾತಲ್ಲ. ಆದರೆ ಕಾರಂತರು 96 ವರ್ಷದ ಬದುಕಿನಲ್ಲಿ ಎಲ್ಲೂ ಉತ್ಸಾಹ ಕಳೆದುಕೊಳ್ಳದೆ ಕ್ರಿಯಾಶೀಲರಾಗಿ ಜೀವಿಸಿದ ಜೀವ. ಅಂತಿಮವಾಗಿ ಕಾರಂತರ ಬಗ್ಗೆ ಮಾತನಾಡುತ್ತಾ, 'ಅವರಿಟ್ಟರು ಎಲ್ಲದರಲ್ಲು ತಪ್ಪದೇ ತಪ್ಪಾಗದ ಹೆಜ್ಜೆ' ಎಂಬ ಮಾತು ಅವರ ಬದುಕಿನ ಅಮೂಲ್ಯವಾದ ಜೀವನ ಶೈಲಿಯನ್ನು ನೆನಪಿಸುತ್ತಾ, ಯಾವುದೇ ಸಮಯದಲ್ಲೂ ತಪ್ಪು ಹೆಜ್ಜೆ ಇಡಬಾರದು. ಅವರಂತೆ ಬದುಕನ್ನು ಚೈತನ್ಯಯುತವಾಗಿ ಸ್ವೀಕರಿಸಬೇಕು. 'ಬಾಳ್ವೆ ಸ್ವೀಕಾರಕ್ಕಿದೆ ಹೊರತು ನಿರಾಕರಣೆಗಲ್ಲ' ಎಂದು ಹೇಳಿದ ಕಾರಂತರು ಜೀವನದಲ್ಲಿ ಬಂದುದ್ದೆಲ್ಲವನ್ನು ಸ್ವೀಕರಿಸಿದ ಜೀವನ್ಮುಖಿ ಚಿಂತಕರಾಗಿದ್ದಾರೆ.

ರಾಗೌ ಅವರು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಭಕ್ತಿಕವಿ ಎನಿಸಿಕೊಂಡಿರುವ ಪು.ತಿ.ನ ಅವರನ್ನು ಸ್ಮರಿಸದೆ ಮುಂದೆ ಹೋಗಿಲ್ಲ. ಮೇಲುಕೋಟೆ ಚಲುವನಾರಾಯಣ ಸನ್ನಿಧಿಯಲ್ಲಿ ಅರಳಿದ ಚೇತನ. ಭಾವನಾತ್ಮಕತೆ ಮತ್ತು ಆಧ್ಯಾತ್ಮಿಕತೆಯನ್ನು ತಮ್ಮ ಸಾಹಿತ್ಯದುದ್ದಕ್ಕೂ ಹೆಚ್ಚಿನದಾಗಿ ಚರ್ಚಿಸಿರುವ ಪುತಿನ ಅವರನ್ನು 'ಭಾವನೆಯ ಬಾನಿನಲ್ಲಿ ಮಡಿದ ಗರುಡ' ಎಂಬುದಾಗಿ ಹೇಳಿದ್ದಾರೆ,

ಸಂಸ್ಕೃತಿಯ ಪ್ರತೀಕವಾಗಿ ಅದಮ್ಯ ಸಾಹಿತ್ಯವನ್ನು ಕೊಟ್ಟ ಕೀರ್ತಿ ಪು.ತಿ.ನ ಅವರದ್ದು. ಇವರ ಮಹಾಕಾವ್ಯವಾದ 'ಶ್ರೀಹರಿಚರಿತೆ' ಕನ್ನಡಿಗರ ನರನಾಡಿನಲ್ಲಿ ಹೊಸ ಚೈತನ್ಯವನ್ನು ತುಂಬಿದೆ. ಕನ್ನಡ ಸಾಹಿತ್ಯದ ಎಲ್ಲ ಪ್ರಕಾರದಲ್ಲೂ ಸಾಹಿತ್ಯ ರಚನೆ ಮಾಡಿ ವರ್ತಮಾನದೊಡನೆ ಬದುಕಿದ ಸಾಹಿತ್ಯ ಶಿಖರ ಎಂಬುದಾಗಿ ಪುತಿನ ಅವರನ್ನು ಕುರಿತ ಅಭಿಪ್ರಾಯ ಸಮಂಜಸವಾಗಿದೆ.

ಅಂತಿಮವಾಗಿ ಕನ್ನಡ ನಾಡು–ನುಡಿಗೆ ಸಂಬಂಧಿಸಿದ ರಾಗೌ ಅವರ ಚಿಂತನೆಗಳು ವಾಸ್ತವದ ನೆಲೆಗಟ್ಟಿನಲ್ಲಿ ಮಹತ್ವಪೂರ್ಣವಾದವು. ಭಾಷೆಯ ಸ್ಥಿತಿಗತಿ, ನಾಡಿನ ಪರಿಸ್ಥಿತಿ ಎಲ್ಲವೂ ಕೂಡ ಇವರ ನಿದ್ದೆಗೆಡಿಸಿದೆ. ಹಾಗಾಗಿ ಎಲ್ಲವನ್ನು ಸಮತೋಲನ ಮಾಡುವ ಹಂಬಲ ಇವರ ಬರವಣಿಗೆಯದ್ದು. ಆದರೆ ನಾವುಗಳು ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನಾವೇ ಭಾಷೆಯನ್ನು ಹೆಚ್ಚಾಗಿ ಬಳಸುವುದರೊಂದಿಗೆ ಸಾಹಿತ್ಯವನ್ನು ಬೆಳಸಬೇಕು. ಈ ವೇಳೆಗಾಗಲೇ ಹೆಮ್ಮರವಾಗಿ ಬೆಳೆದುನಿಂತಿರುವ ಕನ್ನಡ ನಾಡು ಮತ್ತು ನುಡಿಯನ್ನು ಹೆಚ್ಚಿನದಾಗಿ ಬಳಸುವ ನಿಟ್ಟಿನಲ್ಲಿ ನಾಡು–ನುಡಿಯನ್ನು ಪ್ರೀತಿಸೋಣ, ಗೌರವಿಸೋಣ. ಕನ್ನಡಿಗರು ಸ್ವಾಭಿಮಾನಿಗಳು ಎಂಬ ಮಾತಿಗೆ ಅವರ ಕಾವ್ಯದಲ್ಲಿನ ಸತ್ಯದ ಮಾತು.

> ಕಾವ್ಯ ಕೊಡುವುದೋ ಬಿಡುವುದೋ ಬಾಳ
> ಕೊಡಬೇಕು ಸ್ವಾಭಿಮಾನದ ಕಾವ
> (ರಾಗೌ ಸ.ಕಾ.ಪು.ಸ 469)

ಹಾಗಾಗಿ ಕನ್ನಡ ನೆಲ, ಜಲ, ಭಾಷೆ ಮತ್ತು ಸಂಸ್ಕೃತಿಯ ವಿಚಾರದಲ್ಲಿ ನಾವೆಲ್ಲರೂ ಸ್ವಾಭಿಮಾನಿಗಳಾಗಬೇಕು. ನಮ್ಮದು ಎನ್ನುವ ಭಾವನೆ ಬರಬೇಕು. ಇವುಗಳಿಗೆ ಸಂಬಂಧಿಸಿದಂತೆ ದಕ್ಕೆಯುಂಟಾದರೆ ಎಲ್ಲರೂ ಒಗ್ಗಟ್ಟಿನಿಂದ ಹೋರಾಡಬೇಕು. ತಾಯ್ನುಡಿ–ತಾಯ್ನಾಡನ್ನು ರಕ್ಷಿಸುವ ಜವಬ್ದಾರಿ ಪ್ರತಿಯೊಬ್ಬ ಕನ್ನಡಿಗರದ್ದು ಎಂಬುದು ಈ ಲೇಖನದ ಸಂದೇಶ.

**ಪರಾಮರ್ಶನ ಗ್ರಂಥಗಳು :**


1. ಡಾ. ರಾಗೌ ಸಮಗ್ರ ಕಾವ್ಯ, 2012, ಪದ್ಮಶೇಖರ ಪ್ರಿಂಟರ್ಸ್, ಮೈಸೂರು.
2. ಡಾ. ರಾಗೌ ಕಾಲಾತೀತ, 2019, ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಕೇಷನ್ಸ್, ಮೈಸೂರು.
3. ಡಾ. ಬೆಳ್ಳೂರು ವೆಂಕಟಪ್ಪ, 2009, ರಾಗೌ ಕಾವ್ಯ ವಿಮರ್ಶೆ, ಪ್ರಗತಿ ಪ್ರಿಂಟರ್ಸ್, ಬೆಂಗಳೂರು.
4. ರಂ.ಶ್ರೀ. ಮುಗುಳಿ, 1953, ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು.